# ಶ್ರೀ ಹರಿಕಥಾಮೃತಸಾರ

ನಾಗರಾಜು ಹಾವೇರಿ, ಪಲ್ಲವೀಪ್ರಿಯ, ಬೆಂಗಳೂರು – 99010 52578

# ಮಂಗಳಾಚರಣ ಸಂಧಿ

ಹರಿಕಥಾಮೃತಸಾರಗುರುಗಳ
ಕರುಣದಿಂದಾಪನಿತು ಪೇಳುವೆ
ಪರಮಭಗವದ್ಭಕ್ತರಿದನಾದರದಿ ಕೇಳುವುದು ॥ ಪಲ್ಲವಿ ॥

ಹರಿಕಥಾಮೃತಸಾರವನ್ನು ಗುರುಗಳ ಕರುಣದಿಂದ ಯಥಾಶಕ್ತಿ ಹೇಳುವೆನು. ಪರಮ ಭಗವದ್ಭಕ್ತರು ಇದನ್ನು ಭಕ್ತಿಯಿಂದ ಆಲಿಸಬೇಕು.

ಶ್ರೀರಮಣಿ ಕರಕಮಲ ಪೂಜಿತ
ಚಾರು ಚರಣ ಸರೋಜ ಬ್ರಹ್ಮ ಸ
ಮೀರ ವಾಣಿ ಫಣೀಂದ್ರವೀಂದ್ರ ಭವೇಂದ್ರ ಮುಖವಿನುತ
ನೀರಜಭವಾಂಡೋದಯ ಸ್ಥಿತಿ
ಕಾರಣನೇ ಕೈವಲ್ಯದಾಯಕ
ನಾರಸಿಂಹನೆ ನಮಿಪೆ ಕರುಣಿಪದೆಮಗೆ ಮಂಗಳವ ॥ ೧ ॥

ಶ್ರೀರಮಣಿಯಾದ ಲಕ್ಷ್ಮೀದೇವಿಯ ಕರಕಮಲಗಳಿಂದ ಪೂಜಿತವಾದ, ಮನೋಹರವಾದ ಚರಣಕಮಲಗಳನ್ನುಳ್ಳ, ಬ್ರಹ್ಮ ವಾಯು ಸರಸ್ವತಿ ಭಾರತಿ ಶೇಷ

ಗರುಡ ರುದ್ರ ಮತ್ತು ಇಂದ್ರ ಮೊದಲಾದ ದೇವತೆಗಳಿಂದ ಸ್ತುತಿಸಲ್ಪಡುವ, ಬ್ರಹ್ಮಾಂಡದ ಸೃಷ್ಟಿಸ್ಥಿತಿಲಯಗಳಿಗೆ ಕಾರಣನಾದ, ಮೋಕ್ಷನೀಡುವಂತಹಾ ನಾರಸಿಂಹನೇ ನಿನಗೆ ನಮಸ್ಕರಿಸುವೆನು. ನಮಗೆ ಮಂಗಳವನ್ನು ಕರುಣಿಸಿ.

ಜಗದುದರನತಿವಿಮಲ ಗುಣರೂಪದಗಳಾಲೋಚನದಿ ಭಾರತ
ನಿಗಮತತಿಗಳತಿಕ್ರಮಿಸಿ ಕ್ರಿಯಾವಿಶೇಷಗಳ
ಬಗೆ ಬಗೆಯ ನೂತನವ ಕಾಣುತಮಿಗೆ ಹರುಷದಿಂ
ಪೊಗಳಿ ಹಿಗ್ಗುವ ತ್ರಿಗುಣಾಮಾನಿ ಮಹಾಲಕುಮಿ ಸಂತೈಸಲನುದಿನವು ॥ ೨ ॥

ಜಗದುದರನಾದ ಶ್ರೀಹರಿಯ ಅತ್ಯಂತನಿರ್ಮಲವಾದ ಗುಣಗಳನ್ನೂ, ರೂಪಗಳನ್ನೂ, ಬಗೆಬಗೆಯ ಕ್ರಿಯಾವಿಶೇಷಗಳನ್ನು ಆಲೋಚನೆಯಿಂದ ಮಹಾಭಾರತ ಮತ್ತೂ ವೇದಗಳನ್ನೂ ಮೀರಿ, ಬಗೆಬಗೆಯ ನಾವೀನ್ಯವನ್ನು (ಹೊಸದನ್ನು) ಕಾಣುತ್ತಾ, ಪುನಃ ಪುನಃ ಆನಂದದಿಂದ ಹೊಗಳಿ ಹಿಗ್ಗುವ, ಮೂರುಗುಣಗಳಿಗೆ ಅಭಿಮಾನಿಯಾದ ಮಹಾಲಕುಮಿಯು ಅನುದಿನದಲ್ಲೂ ಸಂತೈಸಲಿ.

ನಿರುಪಮಾನಂದಾತ್ಮಭವ ನಿರ್ಜರಸಭಾಸಂಸೇವ್ಯ ಋಜುಗುಣ
ದರಸೆ ಸತ್ವಪ್ರಚುರವಾಣೀಮುಖಸರೋಜೇನ
ಗರುಡ ಶೇಷ ಶಶಾಂಕದಳ ಜನಕ ಜಗದ್ಗುರುವೇ ತ್ವ-
ಚ್ಚರಣಗಳೀಗಭಿವಂದಿಸುವೆ ಪಾಲಿಪುದು ಸನ್ಮತಿಯ ॥ ೩ ॥

ಅಸದೃಶರೂ, ಆನಂದಸ್ವರೂಪರೂ, ಹರಿಯಪುತ್ರರೂ, ದೇವಸಭೆಗಳಲ್ಲಿ ವಿಶೇಷವಾಗಿ ಸೇವಿತರಾದವರೂ, ಋಜುಗಣದ ಒಡೆಯರೂ, ಸತ್ವಗುಣವನ್ನು ವಿಶೇಷವಾಗಿ ಹೊಂದಿರುವವರೂ, ಸರಸ್ವತಿಯ ಮುಖಕಮಲಕ್ಕೆ

ಸೂರ್ಯನಾಗಿರುವವರೂ, ಗರುಡ–ಶೇಷ–ರುದ್ರರಿಗೆ ಜನಕರಾದವರೂ, ಜಗತ್ತಿನ ಗುರುಗಳೂ ಆದ ಬ್ರಹ್ಮದೇವರೇ ನಿಮ್ಮ ಪಾದಗಳಿಗೆ ಚೆನ್ನಾಗಿ ವಂದಿಸುವೆನು. ನಮಗೆ ಉತ್ತಮ ಬುದ್ಧಿಯನ್ನು ಕರುಣಿಸಿ.

ಆರು ಮೂರೆರಡೊಂದು ಸಾವಿರ ಮೂರೆರಡು ಶತಶ್ವಾಸ ಜಪಗಳ
ಮೂರುವಿಧ ಜೀವರೊಳಗಬ್ಜ ಪರಿಯಂತ
ತಾ ರಚಿಸಿ ಸಾತ್ತ್ವರಿಗೆ ಸುಖ ಸಂಸಾರ ಮಿಶ್ರರಿಗಧಮಜನರಿಗ–
ಪಾರ ದುಃಖಗಳೀವ ಗುರುಪವಮಾನ ಸಲಹೆಮ್ಮ ॥ ೪ ॥

ಇಪ್ಪತ್ತೊಂದು ಸಾವಿರದಾ ಆರುನೂರು ಶ್ವಾಸಜಪಗಳನ್ನು ಮೂರುವಿಧಜೀವರೊಳಗೆ ಬ್ರಹ್ಮಕಲ್ಪಪರ್ಯಂತ ತಾವು ಮಾಡಿ, ಸಾತ್ವಿಕರಿಗೆ ಸುಖ, ಮಿಶ್ರ ಜೀವರಿಗೆ ಸಂಸಾರ, ಅಧಮ ಜನರಿಗೆ ಅಪಾರ ದುಃಖಗಳನ್ನು ನೀಡುವ ಗುರುಗಳಾದ ವಾಯುದೇವರೇ ನಮ್ಮನ್ನು ಪಾಲಿಸರಿ.

ಚತುರವದನನ ರಾಣಿ ಅತಿರೋಹಿತ ವಿಮಲ ವಿಜ್ಞಾನಿ ನಿಗಮ
ಪ್ರತತಿಗಳಿಗಭಿಮಾನಿ ವೀಣಾಪಾಣಿ ಬ್ರಹ್ಮಾಣಿ
ನುತಿಸಿ ಬೇಡುವೆ ಜನನೀ ಲಕುಮೀಪತಿಯ ಗುಣಗಳ ತುತಿಪುದಕೆ ಸ–
ನ್ಮತಿಯ ಪಾಲಿಸಿ ನೆಲೆಸು ನೀ ಮದ್ವದನಸದನದಲಿ ॥ ೫ ॥

ಚತುರ್ಮುಖ ಬ್ರಹ್ಮದೇವರ ಪತ್ನಿಯೇ ಎಂದೂ ತಿರೋಧಾನ ಹೊಂದದ ನಿರ್ಮಲವಾದ ತತ್ತ್ವಜ್ಞಾನ ಉಳ್ಳವಳೇ, ವೇದಸಮೂಹದ ಅಭಿಮಾನಿ ದೇವತೆಯೇ, ವೀಣೆಯನ್ನು ಕೈಯಲ್ಲಿ ಹಿಡಿದವಳೇ, ಪರಬ್ರಹ್ಮನಾದ ಶ್ರೀಹರಿಯನ್ನು ಸದಾ ಚಿಂತಿಸುವವಳೇ, ಅಮ್ಮಾ ಸರಸ್ವತಿಯೇ ನಿನ್ನನ್ನು ನಾನು ನಮಸ್ಕರಿಸಿ

ಬೇಡಿಕೊಳ್ಳುವೆನು. ಲಕ್ಷ್ಮೀಪತಿಯಾದ ಶ್ರೀಹರಿಯ ಗುಣಗಳನ್ನು ಸ್ತುತಿಸುವುದಕ್ಕೆ ಸದ್ಬುದ್ಧಿಯನ್ನು ನೀಡಿ ನೀನು ನನ್ನ ಮುಖಮಡಿರದಲ್ಲಿ ನೆಲೆಸು.

ಕೃತಿರಮಣ ಪ್ರದ್ಯುಮ್ನನಂದನೆ ಚತುರವಿಂಶತಿ ತತ್ತ್ವಪತಿ ದೇ-
ವತೆಗಳಿಗೆ ಗುರುವೆನಿಸುತಿಹ ಮಾರುತನ ನಿಜಪತ್ನಿ
ಸತತ ಹರಿಯಲಿ ಗುರುಗಳಲಿ ಸದ್ರತಿಯ ಪಾಲಿಸಿ ಭಾಗವತ ಭಾ-
ರತ ಪುರಾಣ ರಹಸ್ಯ ತತ್ತ್ವಗಳರುಪು ಕರುಣದಲಿ ॥ ೬ ॥

ಅಮ್ಮಾ ಭಾರತೀದೇವಿ ನೀನು ಕೃತಿರೂಪದ ಲಕ್ಷ್ಮೀಪತಿಯಾದ ಪ್ರದ್ಯುಮ್ನರೂಪದ ಶ್ರೀಹರಿಯ ಪುತ್ರಿಯೇ. 24 ತತ್ತ್ವಾಭಿಮಾನಿ ದೇವತೆಗಳಿಗೆ ಗುರುವೆನ್ನಿಸಿರುವ ವಾಯುದೇವರ ನಿಯತಪತ್ನಿಯೇ. ಸತತ ಹರಿಯಲ್ಲೂ, ಗುರುಗಳಲ್ಲೂ ಉತ್ತಮ ಭಕ್ತಿಯನ್ನು ನೀಡಿ, ಭಾಗವತ–ಭಾರತಗಳ ರಹಸ್ಯ ತತ್ತ್ವಗಳನ್ನೆಲ್ಲಾ ಕರುಣದಿಂದಾ ತಿಳಿಸಿಕೊಡು.

ವೇದಪೀಠ ವಿರಂಚಿ ಭವ ಶಕ್ರಾದಿ ಸುರವಿಜ್ಞಾನದಾಯಕ
ಮೋದಚಿನ್ಮಯಗಾತ್ರ ಲೋಕಪವಿತ್ರ ಸುಚರಿತ್ರ
ಛೇದ ಭೇದ ಕುಟಿಲಾಂತಾದಿ ಮಧ್ಯವಿದೂರ
ಆದಾನಾದಿಕಾರಣ ಬಾದರಾಯಣ ಪಾಹಿ ಸತ್ರಾಣ ॥ ೭ ॥

ವೇದಗಳಿಗೆ ಆಶ್ರಯರಾದ, ಬ್ರಹ್ಮ ರುದ್ರ ಇಂದ್ರ ಮೊದಲಾದ ದೇವತೆಗಳಿಗೆ ವಿಶೇಷ ಜ್ಞಾನವನ್ನು ನೀಡುವಂತಹಾ, ಜ್ಞಾನಾನಂದಮಯವಾದ ಶರೀರರಾದ, ಲೋಕಪಾವನರಾದ, ಮಂಗಲಚರಿತ್ರರಾದ, ತುಂಡಾಗುವುದು, ಒಡೆಯುವುದು, ವ್ಯಥೆಪಡುವುದು, ವಂಚನೆ, ಸಾಯುವುದು, ಹುಟ್ಟುವುದು, ಕೆಲವೇ ಕಾಲ ಬದುಕಿರುವುದು ಮೊದಲಾದ ಸಕಲ ದೋಷಗಳಿಂದ ರಹಿತರಾದಂತಹಾ,

ಸ್ವೀಕರಿಸುವುದೇ ಮೊದಲಾದ ಸಕಲಕಾರ್ಯಗಳಿಗೂ ಕಾರಣರಾದಂತಹಾ, ಸಜ್ಜನರಿಗೆ ರಕ್ಷಕರಾದ, ಬದರಿಯಲ್ಲಿ ನೆಲೆಸಿರುವ ಶ್ರೀವೇದವ್ಯಾಸರೇ ನಮ್ಮನ್ನು ಪಾಲಿಸರಿ.

ಕ್ಷಿತಿಯೊಳಗೆ ಮಣಿಮಂತ ಮೊದಲಾದತಿ ದುರಾತ್ಮರು ಒಂದಧಿಕ ವಿಂ-
ಶತಿ ಕುಭಾಷ್ಯವ ರಚಿಸಿ ನಡುಮನೆಯೆಂಬ ಬ್ರಾಹ್ಮಣನ
ಸತಿಯ ಜಠರದೊಳವತರಿಸಿ ಭಾರತೀರಮಣ ಮಧ್ವಾಭಿಧಾನದಿ
ಚತುರದಶಲೋಕದಲಿ ಮೆರೆದಪ್ರತಿಮಗೊಂದಿಸುವೆ ॥ ೮ ॥

ಭೂಮಿಯಲ್ಲಿ ಮಣಿಮಂತ ಮೊದಲಾದ ಅತ್ಯಂತದುರಾತ್ಮರು ಇಪ್ಪತ್ತೊಂದು ದುರ್ಭಾಷ್ಯಗಳನ್ನು ರಚಿಸಿದಾಗ ಮಧ್ಯಗೇಹರೆಂಬ ಬ್ರಾಹ್ಮಣನ ಪತ್ನಿಯ ಉದರದಲ್ಲಿ ಅವತರಿಸಿ "ಮಧ್ವ" ಎಂಬ ಹೆಸರಿನಿಂದ 14 ಲೋಕದಲ್ಲಿ ಮೆರೆದ ಭಾರತೀರಮಣನಾದ ವಾಯುದೇವರಿಗೆ ವಂದಿಸುವೆನು.

ಪಂಚಭೇದಾತ್ಮಕ ಪ್ರಪಂಚಕೆ ಪಂಚರೂಪಾತ್ಮಕನೇ ದೈವಕ
ಪಂಚಮುಖ ಶಕ್ರಾದಿಗಳು ಕಿಂಕರರು ಶ್ರೀಹರಿಗೆ
ಪಂಚವಿಂಶತಿ ತತ್ತ್ವತರತಮ ಪಂಚಿಕೆಗಳನು ಪೇಳ್ದ ಭಾವಿ ವಿ-
ರಂಚಿಯೆನಿಪಾನಂದತೀರ್ಥರ ನೆನೆವೆನನುದಿನವು ॥ ೯ ॥

ಪಂಚವಿಧವಾದ ಭೇದಗಳಿಂದ ಕೂಡಿದ ಈ ಪ್ರಪಂಚಕ್ಕೆ ಪಂಚರೂಪಾತ್ಮಕನಾದ ಶ್ರೀಹರಿಯೇ ದೇವರು. ಪಂಚಮುಖರಾದ ಶಿವ, ಇಂದ್ರ ಮೊದಲಾದ ದೇವತೆಗಳೆಲ್ಲಾ ಅವನಿಗೆ ಕಿಂಕರರು. ತತ್ತ್ವಗಳು ೨೫, ತಾರತಮ್ಯ ಉಂಟು ಎಂಬುದಾಗಿ ಉಪಾಯಗಳನ್ನು ತಿಳಿಸಿದ ಭಾವಿಬ್ರಹ್ಮದೇವರಾದ ಶ್ರೀಮದಾನಂದತೀರ್ಥರನ್ನು ಪ್ರತಿದಿನವೂ ನೆನೆಯುವೆನು.

ವಾಮದೇವ ವಿರಂಚಿತನಯ ಉಮಾಮನೋಹರ ಉಗ್ರಧೂರ್ಜಟಿ
ಸಾಮಜಾಜಿನವಸನಭೂಷಣ ಸುಮನೋತ್ತಂಸ ಕಾಮಹರ ಕೈಲಾಸ ಮಂದಿರ
ಸೋಮಸೂರ್ಯನಲವಿಲೋಚನ
ಕಾಮಿತಪ್ರದ ಕರುಣಿಸೆಮಗೆ ಸದಾ ಸುಮಂಗಳವ ॥ ೧೦ ॥

ವಾಮದೇವನೇ ವಿರಂಚಿತನಯನೇ ಉಗ್ರನೇ ಧೂರ್ಜಟಿಯೇ ಆನೆಯ ಚರ್ಮವನ್ನು ವಸ್ತ್ರವನ್ನಾಗಿ ಹೊಂದಿ ಭೂಷಿತನಾದವನೇ, ಇಂದ್ರಾದಿಗಳಿಗಿಂತಾ ಮಿಗಿಲಾದವನೇ, ಕಾಮನನ್ನು ಭಸ್ಮ ಮಾಡಿದವನೇ, ಕೈಲಾಸದಲ್ಲಿ ನೆಲೆಸಿದವನೇ, ಚಂದ್ರಸೂರ್ಯಾಗ್ನಿಗಳನ್ನು ೩ ಕಣ್ಣುಗಳಲ್ಲಿ ಹೊಂದಿದ ವಿರೂಪಾಕ್ಷನೇ, ಕಾಮಿತವನ್ನು ನೀಡುವವನೇ, ನಮಗೆ ಸದಾ ಶುಭವನ್ನುಂಟುಮಾಡು.

ಕೃತ್ತಿವಾಸನೆ ಹಿಂದೆ ನೀ ನಾಲ್ವತ್ತು ಕಲ್ಪ ಸಮೀರನಲೀ ಶಿ–
ಷ್ಯತ್ವ ವಹಿಸ್ಯಖಿಳಾಗಮಾರ್ಥಗಳೋದಿ ಜಲಧಿಯೊಳು
ಹತ್ತುಕಲ್ಪದಿ ತಪವ ಗೈದಾದಿತ್ಯರೊಳಗುತ್ತಮನೆನಿಸಿ ಪುರು–
ಷೋತ್ತಮನ ಪರಿಯಂಕ ಪದವೈದಿದಿಯೋ ಮಹದೇವ ॥ ೧೧ ॥
ಚರ್ಮಾಂಬರಧರ ಶಿವನೇ, ಹಿಂದೆ ನೀನು ಮುಖ್ಯಪ್ರಾಣನಲ್ಲಿ ಶಿಷ್ಯತ್ವವನ್ನು ವಹಿಸಿ, ೪೦ ಕಲ್ಪಗಳ ಕಾಲ ಸಕಲ ಶಾಸ್ತ್ರಗಳನ್ನೂ ಅಧ್ಯಯನ ಮಾಡಿದೆ. ಮಹಾದೇವನೇ ಸಮುದ್ರದಲ್ಲಿ ೧೦ ಕಲ್ಪಗಳ ಕಾಲಗಳ ತಪಸ್ಸು ಮಾಡಿ, ದೇವತೆಗಳೊಳಗೆ ಉತ್ತಮ ನೆನಿಸಿ ಶ್ರೀಹರಿಯ ಶಯನನಾದ ಶೇಷನ ಪದವಿಯನ್ನು ಹೊಂದುವೆ.

ಪಾಕಶಾಸನಮುಖ್ಯ ಸಕಲ ದಿವೌಕಸರಿಗಭಿನಮಿಪೆ ಋಷಿಗಳಿ–
ಗೇಕ ಚಿತ್ತದಿ ಪಿತೃಗಳಿಗೆ ಗಂಧರ್ವ ಕ್ಷಿತಿಪರಿಗೆ ಆ ಕಮಲನಾಭಾದಿ ಯತಿಗಳ
ನೀಕಕಾನಮಿಸುವೆನು ಬಿಡದೆ ರಮಾಕಳತ್ರನ ದಾಸವರ್ಗಕೆನಮಿಪೆನನವರತ ॥೧೨ ॥

ಇಂದ್ರನೇ ಮೊದಲಾದ ದೇವತೆಗಳಿಗೆ, ಋಷಿಗಳಿಗೆ, ಪಿತೃಗಳಿಗೆ, ಗಂಧರ್ವರಿಗೆ, ಚಕ್ರವರ್ತಿಗಳಿಗೆ ಒಂದೇ ಮನಸ್ಸಿನಿಂದ ನಮಸ್ಕರಿಸುವೆನು. ಆ ಪದ್ಮನಾಭತೀರ್ಥರೇ ಮೊದಲಾದ ಯತಿಗಳ ಗುಂಪಿಗೂ ನಾನು ನಮಸ್ಕರಿಸುವೆನು. ಲಕ್ಷ್ಮೀಪತಿಯಾದ ಶ್ರೀಹರಿಯ ದಾಸ ವರ್ಗಕ್ಕೆ ಸದಾ ನಮಸ್ಕರಿಸುವೆನು.

ಪರಿಮಳವು ಸುಮನದೊಳಗನಲನ
ಅರಣಿಯೊಳಗಿಪ್ಪಂತೆ ದಾಮೋ-
ದರನು ಬ್ರಹ್ಮಾದಿಗಳ ಮನದಲಿ ತೋರಿತೋರದಲೆ
ಇರುತಿಹ ಜಗನ್ನಾಥವಿಠಲನ ಕರುಣ ಪಡೆವ ಮುಮುಕ್ಷು ಜೀವರು
ಪರಮಭಾಗವತರನು ಕೊಂಡಾಡುವುದು ಪ್ರತಿದಿನವು ॥

ಸುಗಂಧವು ಹೂವಿನಲ್ಲೂ, ಅಗ್ನಿಯೂ ಅರಣಿಯೊಳಗೂ ಇರುವ ರೀತಿಯಲ್ಲಿ ದಾಮೋದರನಾದ ಶ್ರೀಹರಿ ಬ್ರಹ್ಮಾದಿದೇವತೆಗಳ ಮನಸ್ಸಿನಲ್ಲಿ ತೋರಿಯೂ, ತೋರದೆಯೂ ಇರುವನು. ಹಾಗಿರುವ ಶ್ರೀಜಗನ್ನಾಥವಿಠಲನ ಕರುಣೆಯನ್ನು ಪಡೆವ ಮುಕ್ತಿಬಯಸುವ ಜೀವರು ಪ್ರತಿದಿನವೂ ಪರಮಭಾಗವತರನ್ನು ಕೊಂಡಾಡಬೇಕು.